## ಸೇವೆ, ತ್ಯಾಗ, ಅಹಿಂಸೆ, ಸತ್ಯಾಗ್ರಹಗಳನ್ನು ನಿಜಾರ್ಥದಲ್ಲಿ ಕಂಡ ಕರ್ಮಯೋಗಿ ಗಾಂಧಿ

# ನಮ್ಮೊಳಗಿನ ಮಹಾತ್ಮನನ್ನು ಎಚ್ಚರಿಸುವ ಕಾಲ ಬಂದಿದೆ



ಗಾಂಧಿಸ್ಮರಣೆ

ಡಾ.ಆರ್.ಬಾಲಸುಬ್ರಹ್ಮಣ್ಯಂ

ಇಡೀ ದೇಶ ಮಹಾತ್ಮ ಗಾಂಧಿಯವರ 150ನೇ ಜನ್ಮ ದಿನಾಚರಣೆಯನ್ನು ಸಂಭ್ರಮಿಸುತ್ತಿದೆ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಜನಿಸಿದ ನನ್ನಂಥ ಅನೇಕ ಮಂದಿಗೆ, ಮಹಾತ್ಮ ಗಾಂಧಿ ಪಠ್ಯಪುಸ್ತಕಗಳಲ್ಲಿ ಪರಿಚಯವಾದ ವ್ಯಕ್ತಿತ್ವ. ನಮ್ಮ ಪಾಲಿಗೆ ಅವರು 'ರಾಷ್ಟ್ರಪಿತ' ಹಾಗೂ ನಮಗೆ ಬ್ರಿಟಿಷರಿಂದ ಬಿಡುಗಡೆಯನ್ನು ತಂದುಕೊಡಲು ಮುಂಚೂಣಿಯಲ್ಲಿ ಹೋರಾಡಿದ ವ್ಯಕ್ತಿ. ಗಾಂಧೀಜಿಯ ಬದುಕು, ಅವರ ಸಂದೇಶವನ್ನು ಅರ್ಥ ಮಾಡಿಕೊಳ್ಳಲು, ಆಳವಾಗಿ ತಿಳಿದುಕೊಳ್ಳಲು ಮುಂದಾಗುವವರೆಗೂ ನಾನು ಅವರ ಬಗ್ಗೆ ಹೊಂದಿದ್ದ ತಿಳಿವಳಿಕೆ ಇಷ್ಟೇ.

ಮುಂದೆ ನನ್ನ ಜೀವನದಲ್ಲಿ, ಮಾನವಾಭಿವೃದ್ಧಿಯ ವಿಚಾರದಲ್ಲಿ ದುಡಿದ ನನ್ನ ಅನುಭವ, ಮೈಸೂರು ಜಿಲ್ಲೆಯ ಬುಡಕಟ್ಟು ಜನರ ಜತೆ ಬೆರೆತು ಮಾಡಿದ ಕೆಲಸಗಳು ಸ್ವಾಮಿ ವಿವೇಕಾನಂದ ಹಾಗೂ ಮಹಾತ್ಮ ಗಾಂಧಿ ಅವರ ಕೆಲಸಗಳಿಂದ ಪ್ರೇರಣೆ ಪಡೆದಂಥವು. ಸ್ವಾಮಿ ವಿವೇಕಾನಂದರು ಸೇವೆ ಹಾಗೂ ತ್ಯಾಗಗಳನ್ನು ರಾಷ್ಟ್ರೀಯ ಆದರ್ಶಗಳಾಗಿ ಪರಿಗಣಿಸಬೇಕು ಎಂದು ಹೇಳಿದರೆ, ಗಾಂಧಿಯವರ ಕಡೆಗೆ ನನ್ನನ್ನು ಸೆಳೆದದ್ದು ಅವರ ಅಹಿಂಸೆ ಹಾಗೂ ಸತ್ಯಗಳ ಪ್ರತಿಪಾದನೆ. ನನ್ನ ಮೇಸ್ಟ್ರುಗಳು ಹೇಳಿದ ಕೇವಲ ಸ್ವಾತಂತ್ರ್ಯ ಹೋರಾಟಗಾರನಿಗಿಂತ ಹೆಚ್ಚಿನದು ಅವರಲ್ಲಿ ನನಗೆ ಕಂಡಿತು. ಅವರೊಬ್ಬ ರಾಜಕಾರಣಿ, ತಂತ್ರಗಾರ, ತತ್ವಜ್ಞಾನಿ, ಮಾನವತಾವಾದಿ, ಅಧ್ಯಾತ್ಮದ ಅನ್ವೇಷಕ, ವಿಜ್ಞಾನಿ, ಬಗಿಯಾದ ಮ್ಯಾನೇಜರ್, ಕಠಿಣ ಪತಿ ಮತ್ತು ತಂದೆ, ಸಮಾಜ ಸೇವಕ, ಚಳವಳಿಗಾರ, ಸಂತ ಹಾಗೂ ದೇಶಭಕ್ತ- ಎಲ್ಲ ಪಾತ್ರಗಳೂ ಒಬ್ಬನಲ್ಲೇ ಏಕೀಭವಿಸಿದಂತಿದ್ದವು. ನನ್ನಂಥ ಸಾಮಾನ್ಯನಿಗೆ ಅವರ ಬದುಕಿನ ವ್ಯಾಪ್ತಿ ವಿಸ್ತಾರಗಳ ಹಾಗೂ ವ್ಯಕ್ತಿತ್ವದ ಅಳತೆ ಮಾಡುವುದು, ಎಷ್ಟೊಂದು ಮಂದಿಗೆ ಏನೆಲ್ಲಾ ಆಗಿದ್ದರು ಎಂಬುದನ್ನು ಅರ್ಥ ಮಾಡಿಕೊಳ್ಳುವುದು ಸಾಧ್ಯವಿರಲಿಲ್ಲ. ''ಇಂಥ ಒಬ್ಬ ವ್ಯಕ್ತಿ ನಮ್ಮ ಜಗತ್ತಿನಲ್ಲಿ ರಕ್ತಮಾಂಸಗಳಿಂದ ತುಂಬಿದ ಒಡಲಿಟ್ಟುಕೊಂಡು ಓಡಾಡಿದ್ದರು ಎಂಬುದನ್ನೇ ನಮ್ಮ ಭವಿಷ್ಯದ ಜನಾಂಗ ನಂಬಲು ಸಾಧ್ಯವಿಲ್ಲ'' ಎಂದು ವಿಜ್ಞಾನಿ ಐನ್‌ಸ್ಟೈನ್ ಹೇಳಿದ ಮಾತು ನನ್ನ ಪಾಲಿಗೆ ಪ್ರತಿಬಿಂಬಿಸುತ್ತಿತ್ತು.

ಗಾಂಧಿಯವರಿಗೆ, ಸತ್ಯ ಹಾಗೂ ಅಹಿಂಸೆಗಳು ಪ್ರಾಚೀನ ಭಾರತದ ಸಾಂಸ್ಕೃತಿಕ ಜಗತ್ತಿನಿಂದ ಕಡ ತಂದ ಸಾಮಗ್ರಿಗಳಾಗಿರಲಿಲ್ಲ. ಈ ಮೌಲ್ಯಗಳ ಅನುಸರಣೆಯೇ ಅವರಿಗೆ ಒಂದು ನೆಲೆಯಲ್ಲಿ ಅಧ್ಯಾತ್ಮಿಕ ಸಾಧನೆ ಹಾಗೂ ಇನ್ನೊಂದು ನೆಲೆಯಲ್ಲಿ ರಾಜಕೀಯ ಕ್ರಿಯೆ ಆಗಿತ್ತು. ಅವರೆಷ್ಟು ನಿಪುಣ ತಂತ್ರಗಾರನಾಗಿದ್ದರೆಂದರೆ, ಈ ಮೌಲ್ಯಗಳ ಪ್ರಯೋಗವನ್ನೇ ಬ್ರಿಟಿಷರ ಎದುರಿನ ಹೋರಾಟದಲ್ಲಿ ಪರಿಣಾಮಕಾರಿ ಆಯುಧವಾಗಿಸಿದರು. ಈ ಮೌಲ್ಯಗಳ ಬಗ್ಗೆ ಅವರು ಹೊಂದಿದ್ದ ನಿಶ್ಚಲವಾದ ಶ್ರದ್ಧೆ ಹಾಗೂ ಆಚರಣೆಯಿಂದಾಗಿ ಅವರು ನಮ್ಮ ಮೆಚ್ಚುಗೆ ಪಡೆದ, ಆದರೆ ಅನುಕರಿಸಲು ಕಷ್ಟವೆನಿಸುವ ವ್ಯಕ್ತಿಯಾಗಿದ್ದರು.

ರಾಜಕೀಯ ನೈತಿಕತೆ ಹಾಗೂ ಸಾರ್ವಜನಿಕ ಪ್ರಾಮಾಣಿಕತೆಯನ್ನು ಅವರು ಎಂಥ ಎತ್ತರಕ್ಕೆ ಒಯ್ದರು ಎಂದರೆ, ಅವರಿಗೆ ಹೋಲಿಸಿದರೆ ಇಂದಿನ ರಾಜಕಾರಣಿಗಳು ಮಂಕಾಗಿ ಕಾಣುತ್ತಾರೆ. ನೈತಿಕತೆ ಎಂಬುದು ಪ್ರದರ್ಶನದ ವಸ್ತುವಾಗಿರದೆ, ರಾಜಕೀಯ ನಾಯಕತ್ವಕ್ಕೆ ಅತ್ಯಗತ್ಯ ಎಂಬುದು ಅವರ ನಂಬಿಕೆಯಾಗಿತ್ತು.

ಮನುಷ್ಯನ ಅಸ್ತಿತ್ವ ಅವನಿಗೆ ದೊರೆತ ಅಸಾಧಾರಣ ಅವಕಾಶ, ಅದು ಅವನ ಸಾಮಾನ್ಯತೆಯಲ್ಲೇ ಕಳೆದುಹೋಗಬಾರದು. ದೇವರ ಹುಡುಕಾಟವು ಈ ಅಸ್ತಿತ್ವದ ಉದ್ದೇಶ ಎಂಬ ನಂಬಿಕೆ ಹೊಂದಿದ್ದ ಗಾಂಧಿ, ತಮ್ಮ ವೈಯಕ್ತಿಕ ಆಧ್ಯಾತ್ಮಿಕ ಹುಡುಕಾಟವನ್ನೇ ಸಾಮಾಜಿಕ ಒಳಿತಿಗಾಗಿ ಪರಿವರ್ತಿಸಿದರು. ಮನುಷ್ಯ ಸಮಾಜದ ಮೂಲಭೂತ ಘಟಕ; ಆತನ ವೈಯಕ್ತಿಕ ಅಸ್ತಿತ್ವವನ್ನು ಆರೋಗ್ಯಕರ ಸಮಾಜದ ರಚನೆಗಾಗಿ ವಿನಿಯೋಗಿಸಬಹುದು ಎಂಬುದು ಅವರ ತಿಳಿವಳಿಕೆ. ಈ ಸಂದೇಶವನ್ನು ತಲುಪಿಸಲು ಅವರು ಸಾಂಕೇತಿಕತೆಯನ್ನು ಶಕ್ತಿಯುತವಾಗಿ ಉಪಯೋಗಿಸಿದರು. ಅದು ಚರಕ ಇರಬಹುದು, ಗುಡಿ ಕೈಗಾರಿಕೆ ಇರಬಹುದು, ಮನೆಮದ್ದು ಇರಬಹುದು. ಅವಶ್ಯಕತೆ ವರ್ಸಸ್ ದುರಾಸೆಯ ಕುರಿತ ಅವರ ಪರಿಕಲ್ಪನೆ, ಅವರ ಆಹಾರಶೈಲಿ, ಸ್ವಾವಲಂಬನೆಯನ್ನು ಸಾರುವ ನಿತ್ಯರೂಢಿಗಳು ಇವೆಲ್ಲವೂ, ಪ್ರಮುಖ ಸಾಮಾಜಿಕ ಬದಲಾವಣೆಗೆ ಮುನ್ನ ಮನುಷ್ಯ ಪರಿವರ್ತಿತನಾಗಬೇಕಾದ ಅಗತ್ಯವನ್ನು ಪ್ರತಿಪಾದಿಸಿದವು. ಇಂದು ನಮಗೆ ಉಳಿದಿರುವುದು ಅವರ ಸಂದೇಶದ ತಾತ್ವಿಕತೆಯ ತಿರುಳಿಲ್ಲದ ಸಂಕೇತಗಳು ಮಾತ್ರ.

ಸಾಮಾಜಿಕ ಸುಧಾರಣೆ ಹಾಗೂ ರಾಷ್ಟ್ರದ ಮರುರಚನೆಗೆ ಜನತೆಯನ್ನು ಗಾಂಧೀಜಿ ಪ್ರೇರೇಪಿಸಿದ ಬಗೆ ತುಂಬ ಜಾಣ್ಮೆಯಿಂದ ಕೂಡಿದ್ದು. ''ಇನ್ನೊಬ್ಬರ ಸೇವೆಯಲ್ಲಿ ನಮ್ಮನ್ನು ಕಳೆದುಕೊಳ್ಳುವುದೇ ತನ್ನನ್ನು ತಾನು ಕಂಡುಕೊಳ್ಳುವ ದಾರಿ,'' ಎಂಬ ಅವರ ಜನಪ್ರಿಯ ಉಕ್ತಿ, ಇದನ್ನು ಪ್ರತಿಪಾದಿಸುತ್ತದೆ. ಇದು ಹೆಚ್ಚು ಸ್ಪಷ್ಟವಾಗಿ ಅರ್ಥವಾಗಬೇಕಾದರೆ, 'ಇನ್ನೊಬ್ಬರಿಗಾಗಿ ಬದುಕುವುದ'ನ್ನು ಅವರು 'ಆಧ್ಯಾತ್ಮಿಕ ನೆಲೆ'ಯಲ್ಲಿಟ್ಟಿದ್ದನ್ನು ಗ್ರಹಿಸಬೇಕು. ಮಾನವ ಸಾಧನೆಯ ಸೀಮಿತತೆ ಹಾಗೂ ಭೌತಿಕ ಶ್ರೀಮಂತಿಕೆಯ ಕ್ಷಣಿಕತೆಗಳನ್ನು ಅವರು ಕಟು ವಿಮರ್ಶೆಗೆ ಒಡ್ಡಿದರು. ಮಾನವನ ಅಸ್ತಿತ್ವದ ಸೀಮಿತ ಪರಿಧಿಯ ಒಳಗೇ ಬದುಕಿಗೆ ಅತ್ಯುನ್ನತ ಕಾರಣ ಹಾಗೂ ಅದು ತಲುಪಬಹುದಾದ ಅತ್ಯುನ್ನತ ಸ್ಥಿತಿಗಳನ್ನು ಅವರು ಕಲ್ಪಿಸಿಕೊಟ್ಟರು. ಸರಳ ಮಾತುಗಳಲ್ಲಿ, ಬದುಕಲು ಉನ್ನತ ಆದರ್ಶಗಳನ್ನು ನೀಡಿದರು, ಅದರಲ್ಲೇ ಲಕ್ಷಾಂತರ ಮಂದಿಯ ಯಾತನೆಗೆ ಉತ್ತರ ಕೊಟ್ಟರು. ಹಾಗೆ ಮಾಡುವ ಮೂಲಕವೇ ನಮಗೆ ಪ್ರಾಪ್ತವಾಗುವ ಅಸೀಮಿತವಾದ ಶಕ್ತಿಯ ಪರಿಚಯ, ನಮ್ಮೆಲ್ಲ ಚಿಂತೆಗಳ ನಿವಾರಣೆ, ಆಂತರಿಕ ಶಕ್ತಿಯನ್ನು ಬಳಸಿಕೊಂಡು ಮನುಕುಲದ ಸಮಸ್ಯೆಗಳನ್ನು ಪರಿಹರಿಸುವ ರೀತಿಗಳನ್ನು ತಿಳಿಸಿದರು.

ಬಡತನ ಎಂದರೆ ಹಿಂಸೆಯ ಅತಿ ಕೆಟ್ಟ ರೂಪ; ಸಮಾಜದ ಕಟ್ಟ ಕೊನೆಯಲ್ಲಿರುವ ವ್ಯಕ್ತಿಯೂ ದೇಶದ ಆರ್ಥಿಕ ಸದೃಢತೆಗೆ ತನ್ನ ಕೊಡುಗೆ ಕೊಡಲು ಶ್ರಮಿಸಬೇಕೆಂಬುದು ಅವರ ನಂಬಿಕೆ. ನಾವಿಂದು ಭಾರತದ ಆರ್ಥಿಕ ಬೆಳವಣಿಗೆಯನ್ನು ಸಂಭ್ರಮಿಸುತ್ತಿರ ಬಹುದು. ಅದೇ ವೇಳೆಗೆ, ಭಾರತದ ಕನಸು 8 ಶೇಕಡ ಜಿಡಿಪಿ ಗಳಿಸುವುದಷ್ಟೇ ಅಲ್ಲ, ದೇಶದ ಗ್ರಾಮೀಣ ಭಾಗಗಳನ್ನೂ ಸರ್ವಾಂಗೀಣವಾಗಿ ಒಳಗೊಂಡ ಪ್ರಗತಿಯಾಗಿರಬೇಕು. ಗಾಂಧಿಯವರನ್ನು ರಮ್ಯವಾಗಿ ಕಾಣುವುದರ ಬದಲಾಗಿ ಇಂದಿನ ನಮ್ಮ ದೇಶದ ಆರ್ಥಿಕತೆಯ ಪ್ರಗತಿಯ ಕಥೆ ಹೇಗೆ ನಗರಕೇಂದ್ರಿತವಾಗಿ ಬದಲಾಯಿತು ಎಂಬುದನ್ನು ಚಿಂತಿಸಬೇಕು. ಗಾಂಧಿಯವರು ಪ್ರತಿಪಾದಿಸಿದ ಖಾದಿ ಉದ್ಯಮ ಇಂದು ಪ್ರಸ್ತುತತೆ ಕಳೆದುಕೊಂಡಿರಬಹುದು; ಆದರೆ ಅವರ ಆರ್ಥಿಕ ಚಿಂತನೆಯಾದ 'ಸಣ್ಣದು ಸುಂದರ' ಎಂಬುದು ಎಂದಿಗೂ ಬೆಲೆ ಕಳೆದುಕೊಳ್ಳುವುದಿಲ್ಲ. ಅರ್ಥವ್ಯವಸ್ಥೆಯ ಮಹಾಯಾತ್ರೆಯಲ್ಲಿ ಬಲಹೀನ ವರ್ಗ ಸೇರದೆ ಉಳಿದುಕೊಂಡಿದೆ; ಅವರನ್ನು ಸೇರಿಸಿಕೊಂಡು ನಾವು ಚಿಂತಿಸಬೇಕು.ಸಣ್ಣ ಉದ್ಯಮಗಳ ಬಗ್ಗೆ ಅವರು ಹೇಳಿದ್ದನ್ನು ಇಂದಿನ ಬೆಳಕಿನಲ್ಲಿ ನೋಡಬೇಕು. ಉದ್ಯೋಗಗಳನ್ನು ಸೃಷ್ಟಿಸುವುದು, ಉದ್ಯಮ ಮಾಲೀಕತ್ವ, ಆರ್ಥಿಕ ಬೆಳವಣಿಗೆ- ಇವುಗಳ ಬಗ್ಗೆಯಷ್ಟೇ ಚಿಂತಿಸುತ್ತ ಇರದೆ, ಗ್ರಾಮೀಣ ಸಣ್ಣ ಉದ್ಯಮಗಳನ್ನು ಸುಧಾರಿಸಬೇಕು. ಅವು ಆರ್ಥಿಕತೆಗೆ ತಮ್ಮದೇ ಕೊಡುಗೆ ನೀಡುವುದಲ್ಲದೆ, ಗ್ರಾಮೀಣ ಸಮುದಾಯಗಳ ಸ್ಥಿತಿಗತಿ ಚೈತನ್ಯಗಳನ್ನೂ ಸುಧಾರಿಸುತ್ತವೆ. ನಗರ ವಲಸೆಯನ್ನು ಮಿತಗೊಳಿಸುತ್ತವೆ. ಇದನ್ನೇ ಗಾಂಧಿ ಪ್ರತಿಪಾದಿಸಿದ್ದರು.



ಇಂದಿನ ದಿನಗಳಲ್ಲಿ ಕ್ಲೀಷೆಯಾಗಿರುವ ಇನ್ನೊಂದು ಪರಿಕಲ್ಪನೆ 'ಸತ್ಯಾಗ್ರಹ'. ಸಾಮಾನ್ಯ ಬೀದಿ ಪ್ರತಿಭಟನೆಗಳಿಗೂ, ಕ್ಷುಲ್ಲಕ ರಾಜಕೀಯ ಉದ್ದೇಶದ ಹೋರಾಟಗಳಿಗೂ ಸತ್ಯಾಗ್ರಹ ಎನ್ನಲಾಗುತ್ತಿದೆ. ಅದು ಗಾಂಧೀಜಿಯವರ ಅತ್ಯಂತ ಪ್ರಬಲ ಅಸ್ತ್ರವಾಗಿತ್ತು. ಇಲ್ಲಿರುವ ವ್ಯತ್ಯಾಸ ಎಂದರೆ, ಗಾಂಧಿ ತಮ್ಮ ಸತ್ಯಾಗ್ರಹವನ್ನು ಆಧ್ಯಾತ್ಮಿಕ ನೆಲೆಯಲ್ಲಿಟ್ಟಿದ್ದರು; ಬ್ಲ್ಯಾಕ್ ಮೇಲ್ ಮಾಡುವ ತಂತ್ರವಾಗಿ ಎಂದೂ ಬಳಸಿರಲಿಲ್ಲ. ರಾಷ್ಟ್ರಧ್ವಜವನ್ನು ತೂಗಾಡಿಸುವುದು, ಘೋಷಣೆ ಕೂಗುವುದಷ್ಟೇ ಆಗಿರದೆ ಹೊಣೆಗಾರಿಕೆಯನ್ನು ನೆನಪಿಸುವುದಾಗಿತ್ತು. ಆತ್ಮಶುದ್ಧೀಕರಣ, ನೈತಿಕ ಪರಿವರ್ತನೆಯ ಸಾಧನವಾಗಿತ್ತು. ಗಾಂಧಿಯ ದೃಷ್ಟಿಯಲ್ಲಿ ಸತ್ಯಾಗ್ರಹಿಯು ಉನ್ನತ ಮೌಲ್ಯಗಳನ್ನು ಅಂತರ್ಗತವಾಗಿ ಅಳವಡಿಸಿಕೊಳ್ಳಬೇಕು; ಯಾವುದೇ ವ್ಯವಸ್ಥೆ ಅಥವಾ ವ್ಯಕ್ತಿಯ ಬಗ್ಗೆ ದ್ವೇಷಭಾವ ಹೊಂದಿರಬಾರದು. ಸತ್ಯಾಗ್ರಹಿಯಲ್ಲಿ ಸತ್ಯದೆಡೆಗೆ ಅದಮ್ಯವಾದ ಪ್ರೀತಿಯಿದ್ದು, ಅದನ್ನು ಪಡೆಯುವವರೆಗೂ ಶಾಂತಿಯುತವಾದ ವಿಧಾನಗಳಿಂದ ಆತ್ಮವಿಮರ್ಶೆಯನ್ನೂ ಜತೆಗೇ ಕೈಗೊಂಡು ಮುನ್ನಡೆಯಬೇಕು. ಶಾಂತಿಯುತ ಅಹಿಂಸಾ ವಿಧಾನದ ಕುರಿತ ಗಾಂಧಿ ಚಿಂತನೆಯಲ್ಲಿ ವ್ಯಕ್ತಿವೈಭವಕ್ಕೆ, ಇಂದಿನ ಸಾರ್ವಜನಿಕ ಬದುಕಿನಲ್ಲಿ ಕಂಡುಬರುತ್ತಿರುವ ಪ್ರದರ್ಶನರತಿಗೆ ಸ್ಥಾನವಿರಲಿಲ್ಲ. ಸತ್ಯಾಗ್ರಹದ ಅರ್ಥ, ಚೈತನ್ಯಗಳ ಬಗ್ಗೆ ಗಾಂಧೀಜಿಗೆ ಸ್ಪಷ್ಟತೆಯಿತ್ತು. 'ಸತ್ಯ' ಮತ್ತು 'ಆಗ್ರಹ' ಜತೆಗೇ ಸಾಗಬೇಕೆಂದು ಅವರ ನಂಬಿಕೆ.

ಗಾಂಧಿ ಜಯಂತಿಯ 150ನೇ ಸಂಭ್ರಮಾಚರಣೆ ವೇಳೆ ನಾವು ಅವರ ಸಂದೇಶವನ್ನು ಬೌದ್ಧಿಕವಾಗಿ ವಿವರಿಸಿಕೊಳ್ಳುವುದು, 'ಸ್ವಚ್ಛ ಭಾರತ'ದ ನಿರ್ಮಾಣ ಇತ್ಯಾದಿಗಳಿಂದ ಮತ್ತಷ್ಟು ಮುಂದೆ ಸಾಗಬೇಕು. ಗಾಂಧಿ ತತ್ವಜ್ಞಾನದ ನೈಜ ವಾರಸುದಾರರು ಯಾರು ಎಂಬ ಬಗ್ಗೆ ಕ್ಷುಲ್ಲಕ ರಾಜಕೀಯ ಚರ್ಚೆಗಳನ್ನು ಬದಿಗಿಡಬೇಕು. ಗಾಂಧಿಯನ್ನು ಯಾವುದು ಮಹಾತ್ಮರನ್ನಾಗಿಸಿತು ಎಂಬುದರ ಬಗ್ಗೆ ನಾವೆಲ್ಲ ಚಿಂತಿಸಬೇಕು. ಪ್ರೀತಿ, ಶಾಂತಿ, ಅಹಿಂಸೆ, ಸತ್ಯಗಳೆಡೆಗಿನ ನಮ್ಮ ಬದ್ಧತೆಯ ಬಗ್ಗೆ ವೈಯಕ್ತಿಕ ನೆಲೆಯಲ್ಲಿ ನಿರಂತರ ಎಚ್ಚರದಿಂದಿರಬೇಕು ಹಾಗೂ ನಮ್ಮ ಸಣ್ಣ ಸಣ್ಣ ಕ್ರಿಯೆಗಳಲ್ಲೂ ಅದನ್ನು ಪ್ರತಿಫಲಿಸಬೇಕು. ಪ್ರತಿದಿನ ಅವರ ಸಂದೇಶವನ್ನು ಪಾಲಿಸುವುದೇ ಅವರ ಕನಸನ್ನು ಸಾಕ್ಷಾತ್ಕರಿಸುವ ಹಾದಿ. ನಮ್ಮೊಳಗಿನ ಮಹಾತ್ಮನನ್ನು ಎಚ್ಚರಿಸಿದಾಗಲೇ ಅದು ಸಾಧ್ಯ.

(ಲೇಖಕರು ಸಾಮಾಜಿಕ ಕಾರ್ಯಕರ್ತ ಮತ್ತು ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಸ್ಥಾಪಕ)